ಅಂದು ಶಾಲೆ ಬಿಟ್ಟ ನಂತರ ಮನೆಗೆ ಬಂದು ಕಿವಿ ನೋವೆಂದು ಅಳುತ್ತಾ ನಿದ್ದೆ ಹೋಗಿದ್ದ ವೈಭವ್ ಕೆನ್ನೆ ಮೇಲಿನ ಗಾಯವನ್ನು ಯಾರೋ ನೇವರಿಸಿದಂತಾಯಿತು. ತಾಯಿಯ ಮೃದು ಕೈಗಳಲ್ಲ! ಅಪ್ಪನಂತೂ ತನ್ನನ್ನು ನೇವರಿಸಿದ್ದು ವೈಭವ್‌ಗೆ ನೆನಪಿರಲಿಲ್ಲ. ಕಣ್ತೆರೆದು ನೋಡಿದರೆ ಅಜ್ಜ!

ಅಜ್ಜನ ಕಣ್ಣಲ್ಲಿ ನೀರು ಕಂಡ ವೈಭವ್‌ಗೆ ಗಂಟಲುಬ್ಬಿ ಬಂತು. ಇಬ್ಬರೂ ತಬ್ಬಿಕೊಂಡರು. ಅಜ್ಜ 'ವೈಭವ್, ನೀನು ಇಲ್ಲಿರುವುದು ಬೇಡ. ನನ್ನೊಂದಿಗೆ ಊರಿಗೆ ಬಾ. ಅಲ್ಲೇ ಶಾಲೆಗೆ ಸೇರುವೆಯಂತೆ. ನಿಮ್ಮ ಅಪ್ಪನಿಗೆ ಹೇಳುತ್ತೇನೆ' ಎಂದಾಗ ವೈಭವ್‌ಗೆ ಮುಳುಗುವವನಿಗೆ ಹುಲ್ಲುಕಡ್ಡಿ ಸಿಕ್ಕಂತಾಯಿತು.

ಸಂಜೆ ಕೃಷ್ಣಮೂರ್ತಿಯವರ ಮುಂದೆ ಈ ಪ್ರಸ್ತಾಪ ಇರಿಸಿದಾಗ ಅವರೂ ಅಪ್ಪನ ಮಾತಿಗೆ ಎದುರಾಡಲಿಲ್ಲ. ತನ್ನ ಕಣ್ಣೊಳಗೆ ಮರಳಾಗಿ ಕಾಡುವುದಕ್ಕಿಂತ ವೈಭವ್ ತನ್ನ ಕಣ್ಣೆದುರು ಇರದಿರುವುದೇ ಒಳ್ಳೆಯದು ಎಂದು ಸುಮ್ಮನಾದರು. ಅಮ್ಮ ಸುಗುಣ ಕೂಡಾ ಮಗನು ಹೇಗೂ ಇಲ್ಲಿ ಓದುವುದಿಲ್ಲವಾದ್ದರಿಂದ ಎಲ್ಲೋ ಅಜ್ಜಿ ತಾತರ ಆರೈಕೆಯಲ್ಲಿ ಸುಖವಾಗಿರಲಿ ಎಂದು ಒಪ್ಪಿಕೊಂಡಳು. ಕೃಷ್ಣಮೂರ್ತಿ ಅವರ ತಂದೆಯ ಒಬ್ಬನೇ ಮಗನಾಗಿದ್ದು ಹಳ್ಳಿಯಲ್ಲಿ ಸ್ವಲ್ಪವೇ ಜಮೀನು ಹೊಂದಿದ್ದರು. ವೈಭವ್‌ನನ್ನು ಅಜ್ಜ ಹಳ್ಳಿಯಲ್ಲಿದ್ದ ಸರ್ಕಾರಿ ಶಾಲೆಗೆ ಸೇರಿಸಿದರು. ವೈಭವ್ ಆಗಾಗ್ಗೆ ಅಜ್ಜನ ಜೊತೆ ಸೇರಿ ಜಮೀನಿನಲ್ಲಿ ವ್ಯವಸಾಯ ಮಾಡಲು ನೆರವಾಗುತ್ತಿದ್ದನು. ಓದುವ ಮನಸ್ಸು ಅಷ್ಟರಲ್ಲೇ ಇದ್ದುದರಿಂದ ಎರಡನೇ ದರ್ಜೆಯಲ್ಲಿ ಎಸ್‌ಎಸ್‌ಎಲ್‌ಸಿ ಪಾಸು ಮಾಡಿ ನಂತರ ಪಿಯುಸಿಗೆ ಓದು ಮುಗಿಸಿದನು.

ಇತ್ತ ಕೃಷ್ಣಮೂರ್ತಿ ಅವರ ನಿರೀಕ್ಷೆಯಂತೆ ವೈಷ್ಣವ್ ವಿದೇಶದಲ್ಲಿ ಉದ್ಯೋಗ ಗಿಟ್ಟಿಸಿದನು. ಉತ್ತರ ಭಾರತದ ಹುಡುಗಿಯೊಬ್ಬಳನ್ನು ಮೆಚ್ಚಿ ಅಪ್ಪ-ಅಮ್ಮನಿಗೆ ಅವಳನ್ನೇ ತಾನು ಮದುವೆಯಾಗುವುದಾಗಿ ತಿಳಿಸಿದಾಗ, ಮಗನ ಯಾವುದೇ ಆಸೆಗೂ ಅಡ್ಡ ಬರದ ಕೃಷ್ಣಮೂರ್ತಿಯವರು ವೈಷ್ಣವ್ ಮದುವೆಯನ್ನು ವಿಜೃಂಭಣೆಯಿಂದ ಮಾಡಿದರು. ಇತ್ತ ವೈಭವ್, ಅಜ್ಜನಿಗೆ ವಯಸ್ಸಾಗುತ್ತಾ ಬಂದಂತೆ ತಾನೇ ಜಮೀನಿನ ಜವಾಬ್ದಾರಿಯನ್ನು ಕೈಗೆತ್ತಿಕೊಂಡು ತೋಟಗಾರಿಕಾ ಇಲಾಖೆಯ ಅಧಿಕಾರಿಗಳನ್ನು ಕೇಳಿ, 'ಆ ಮಣ್ಣಿಗೆ ಸೂಕ್ತ ಯಾವ ಬೆಳೆ ಬರಬಹುದು? ಸೂಕ್ತ ನಿರ್ವಹಣೆ ಹೇಗೆ?' ಎನ್ನುವುದನ್ನು ಕಲಿತು, ವ್ಯವಸಾಯದಲ್ಲಿ ಸಂಪೂರ್ಣ ತನ್ನನ್ನು ತೊಡಗಿಸಿಕೊಂಡು ಮತ್ತಷ್ಟು ಜಮೀನು ಕೊಂಡು ಅಭಿವೃದ್ಧಿಪಡಿಸಿದನು. ಹಳ್ಳಿ ಜೀವನ ಮೆಚ್ಚುವ ಸಾಮಾನ್ಯ ಹುಡುಗಿಯೊಬ್ಬಳೊಂದಿಗೆ ಮದುವೆ ಮಾಡಲು ಅಜ್ಜ ಅಜ್ಜಿ ನಿಶ್ಚಯಿಸಿದಾಗ ಕೃಷ್ಣಮೂರ್ತಿ ದಂಪತಿ ಬಂದು ಮದುವೆ ಶಾಸ್ತ್ರ ನೆರವೇರಿಸಿ ಹೋದರು. ವರ್ಷಗಳುರುಳಿ ಅಜ್ಜ ಅಜ್ಜಿಯ ಕಾಲಾನಂತರದಲ್ಲಿ ವೈಭವ್ ಒಳ್ಳೆಯ ಮನೆ ಕಟ್ಟಿ ಉತ್ತಮ ಜೀವನ ನಡೆಸುತ್ತಿದ್ದನು.

ವೈಷ್ಣವ್ ವಿದೇಶಕ್ಕೆ ಹಾರಿ ಹತ್ತು ಹನ್ನೆರಡು ವರ್ಷಗಳೇ ಉರುಳಿದ್ದರೂ ಒಮ್ಮೆಯೂ ತನ್ನ ತಂದೆ ತಾಯಿಯರನ್ನು ಕರೆಸಿಕೊಂಡಿರಲಿಲ್ಲ. ಪದೇ ಪದೇ ಈ ವಿಷಯ ಪ್ರಸ್ತಾಪಿಸಿದ ಕೃಷ್ಣಮೂರ್ತಿ ಅವರಿಗೆ ಮಗನಿಂದ ಯಾವ ಧನಾತ್ಮಕ ನಡೆಯೂ ಕಾಣದೆ, ತಾವೇ ತಮ್ಮ ನಿವೃತ್ತಿ ಹಣದಿಂದ ತನಗೂ ತಮ್ಮ ಶ್ರೀಮತಿಗೂ ಒಂದು ತಿಂಗಳ ಮಟ್ಟಿಗೆ ಹೋಗಿ ಬರಲು ಏಜೆಂಟರ ಸಹಾಯದಿಂದ ಟೂರಿಸ್ಟ್ ವೀಸಾದಲ್ಲಿ ಟಿಕೆಟ್ ಬುಕ್ ಮಾಡಿ, ಇಂತಹ ದಿವಸ ಬರುವುದಾಗಿ ಮಗನಿಗೆ ತಿಳಿಸಿದರು. ಏಜೆಂಟರಿಂದ ಸಿಮ್ ಕಾರ್ಡ್ ಹಾಕಿಸಿಕೊಂಡು ಹೆಚ್ಚೂಕಡಿಮೆ ಒಂದೂವರೆ ದಿನದ ಪ್ರಯಾಣದ ನಂತರ ವಿದೇಶದ ನೆಲದಲ್ಲಿ ಕಾಲೂರಿದರು. ಏರ್‌ಪೋರ್ಟ್‌ನಲ್ಲಿ ಕರೆದುಕೊಂಡು ಹೋಗಲು ಬಂದಿದ್ದ ಮಗನ ಮುಖದಲ್ಲಿ ನಗೆಯ ಗೆರೆಗಾಗಿ ಹುಡುಕಿದ ಮೂರ್ತಿಗಳಿಗೆ ವೈಷ್ಣವ್ ಯಾಕೋ ಧುಮುಗುಡುತ್ತಿರುವಂತೆ ಕಂಡಿತು. ಈಗಲೇ ಬರುವ ಅವಸರವೇನಿತ್ತು ಎನ್ನುತ್ತಲೇ ಲಗೇಜ್ ಕಲೆಕ್ಟ್ ಮಾಡಿಕೊಂಡ ಮಗ ಕಾರಿನಲ್ಲಿ ತಮ್ಮನ್ನು ವಿದೇಶದ ರಸ್ತೆಯಲ್ಲಿ ಕರೆದುಕೊಂಡು ಹೋಗುತ್ತಿದ್ದರೆ, ಮೂರ್ತಿಗಳಿಗೆ ಸ್ವರ್ಗ ಮೂರೇ ಗೇಣು. ಕೂಡಲೇ ರಸ್ತೆಯ ಫೋಟೊ, ಕಟ್ಟಡಗಳ ಫೋಟೊ ತಮ್ಮ ಮೊಬೈಲ್‌ನಲ್ಲಿ ಕ್ಲಿಕ್ಕಿಸಿ, whatsapp statusಗೆ ಹಾಕಿ ಹರ್ಷಿಸಿದರು.

ಮನೆಗೆ ಬಂದಿಳಿಯುತ್ತಲೇ ನಗುಮೊಗದ ನಿರೀಕ್ಷೆಯಲ್ಲಿ ಸೊಸೆಯ ಕಡೆ ನೋಡಿದವರಿಗೆ ಅಲ್ಲೂ ಕಂಡದ್ದು ಧುಮುಗುಡುವ ಮುಖವೇ. ಸದ್ಯ ನಾಲ್ಕು